ತರಲೆಂದು ಸಂಕರ ಬಾವಿಗೆ ಹೋಗುವ ನೆಪ ಮಾಡಿ ಮನೆಯಿಂದ ಹೊರ ಬಂದ ಸಿದ್ಧಮ್ಮ ಕೊಡವನ್ನು ಬಾವಿ ದಂಡೆಯ ಮೇಲಿಟ್ಟು, ಉಟ್ಟ ಸೀರೆಯ ಮೇಲೆಯೇ ಓಡಿ ಹೋಗಿ ತೌರುಮನೆಯನ್ನು ಸೇರಿಕೊಂಡಳು. ಆ ನಂತರ ಮರಳಿ ಗಂಡನ ಮನೆಯ ಹೊಸಿಲು ತುಳಿಯಲೇ ಇಲ್ಲ! ಬಸಪ್ಪನ ಕೈಯಲ್ಲಿ ಅಷ್ಟೊಂದು ಹೈರಾಣಾಗಿ ಹೋಗಿದ್ದ ಸಿದ್ಧಮ್ಮ, ಶಾಶ್ವತವಾಗಿ ತೌರುಮನೆಯನ್ನು ಸೇರಿಕೊಳ್ಳುವುದರ ಮೂಲಕ ಇತ್ತ ಕಲ್ಲವ್ವನ ಭವಿಷ್ಯಕ್ಕೆ ಎರವಾಗಿ ಬಿಟ್ಟಳು!

ಯಾವಾಗ ಬಸಪ್ಪನು ಕೊಡುತ್ತಿದ್ದ ದೈಹಿಕ ಕಾಚಣಿಯನ್ನು ತಡೆಯಲಾಗದೇ ಸಿದ್ಧಮ್ಮ ಗಂಡನ ಮನೆಯನ್ನೇ ತೊರೆದು ತನ್ನ ತೌರುಮನೆಯಲ್ಲಿ ಬಂದು ಕುಂತಳೋ ಆಗಲೇ ಬಸಪ್ಪನಿಗೆ ದಿಕ್ಕು ತೋಚದಂತಾಯಿತು. ವಿಷಯ ಹೀಗಿರಲು ದಿನ ಕಳೆದಂತೆ ಆತ ರಾತ್ರಿ ಹೊತ್ತಲ್ಲಿ ಹಾಸುಗೆಯಲ್ಲಿ ಸಿದ್ಧಮ್ಮನ ಸಾಮಿಪ್ಯವಿಲ್ಲದೇ ಹುಚ್ಚನಂತಾಗಿ ಹೋದ! ಆದರೆ, ಇದಾವುದರ ಅರಿವು ಇಲ್ಲದ ಕಲ್ಲವ್ವ ಮಾತ್ರ ತನ್ನ ಗಂಡನೊಂದಿಗೆ ಬಸಪ್ಪನ ಹೊಟ್ಟೆಗೂ ಸಹ ಕೂಳು ಬಡುದು ಹಾಕುವ ಜವಾಬ್ದಾರಿಯನ್ನು ತನಗರಿವಿಲ್ಲದಂಗೆಯೇ ಹೊತ್ತುಕೊಂಡು ಜಲುಮ ಹಾಕುತ್ತ ನಡೆದಿದ್ದಳು. ಆ ಸಂದರ್ಭದಲ್ಲಿಯೇ ಆಕೆಯ ಬದುಕಿನಲ್ಲಿ ಯಾರೂ ಊಹಿಸಲಾಗದ ಘಟನೆಯೊಂದು ಸಂಭವಿಸಿತು.

ಸಿದ್ಧಮ್ಮ ತೌರುಮನೆಯನ್ನು ಸೇರಿಕೊಂಡ ನಂತರ ವರ್ಸಾರು ತಿಂಗಳು ಹೆಣ್ಣಿನ ಸಾಮೀಪ್ಯವನ್ನೇ ಹೊಂದಿರದಿದ್ದ ಬಸಪ್ಪ ತನ್ನ ದೇಹ ಬಯಕೆಯನ್ನು ತಡೆದುಕೊಳ್ಳಲಾಗದೇ ಅದೊಂದು ದಿನ ಇಳಿಸಂಜೆ ಹೊತ್ತಲ್ಲಿ, ಪಡಸಾಲೆಯಲ್ಲಿ ಕಂದೀಲಿನ ಗಾಜು ಒರೆಸುತ್ತ ಕುಂತಿದ್ದ ಕಲ್ಲವ್ವನ ಮೈಮೇಲೆ ಏಕಾಏಕಿ ಆಕ್ರಮಣ ಮಾಡಿದ್ದ! ಇದರಿಂದ ಕಂಗಾಲಾಗಿ ಹೋದ ಆಕೆಗೆ ಆ ಕ್ಷಣದಲ್ಲಿ ಏನು ಮಾಡಬೇಕೆಂದು ತೋಚದಂತಾಯಿತು. ಆ ಗೊಂದಲದಲ್ಲಿರುವಾಗಲೇ ಇನ್ನೇನು ಕಲ್ಲವ್ವನನ್ನು ಇಡಿಯಾಗಿ ಮೈತುಂಬಿಕೊಂಡುಬಿಟ್ಟ ಎನ್ನುವಷ್ಟರಲ್ಲಿ ಆಕೆ ಜೋರಾಗಿ ಬಾಯಿ ಮಾಡಿ ಜನರನ್ನು ಕೂಡಿಸಿದಳು. ಆಗ ಮನೆ ಮುಂದೆ ನೆರೆದ ಜನರನ್ನು ಕಂಡು ಹೆದರಿದ ಬಸಪ್ಪ ಹಿತ್ತಿಲ ಬಾಗಿಲಿನಿಂದ ಓಡಿ ಹೋಗಿ ತಪ್ಪಿಸಿಕೊಂಡ. ಆಗಲೇ, ಈ ಸುದ್ದಿ ಗಾಳಿಯೊಂದಿಗೆ ಬೆರೆತು ಊರ ತುಂಬೆಲ್ಲ ಹರಿದಾಡತೊಡಗಲು ಯಾರದೋ ಮನೆಯಲ್ಲಿ ಗಂಡ ಹೆಂಡತಿ ನಡುವಿನ ಜಗಳದ ನ್ಯಾಯ ಪಂಚಾಯಿತಿ ಮಾಡುತ್ತ ಕುಂತಿದ್ದ ಹುಚ್ಚಪ್ಪನ ಕಿವಿಯ ಮೇಲೆ ಬಂದು ಬೀಳಲು ಬೆಚ್ಚಿಬಿದ್ದ. ಆ ಗಳಿಗೆಯಲ್ಲಿ ಆ ಸುದ್ದಿಯನ್ನು ಕೇಳಿ ಕಟಿಕಟಿ ಬೆವೆತು ಹೋದ ಆತನಿಗೆ ಏನು ಮಾಡಬೇಕೆಂದು ತೋಚದೆ ಒಳಗೊಳಗೆ ಸಂಕಟಪಡತೊಡಗಿದ. ಆ ಸಂಕಟದಲ್ಲಿ ತನಗಾದ ಅವಮಾನವನ್ನು ತಡೆದುಕೊಳ್ಳಲಾಗದ ಹುಚ್ಚಪ್ಪನು ತಟ್ಟನೆ ಅಲ್ಲಿಂದ ಎದ್ದು ಹೋಗಿ ಊರಾಚೆ ಇರೋ ಹುಣಸೆ ಗಿಡಕ್ಕೆ ಉಟ್ಟ ಧೋತರದ ಚಾಳಿಯಿಂದಲೇ ಉರುಲಾಕ್ಕೊಂಡು ಸತ್ತು ಹೋದ! ಆಗ ಹುಚ್ಚಪ್ಪ ತೆಗೆದುಕೊಂಡ ಆತುರದ ನಿರ್ಧಾರದಿಂದಾಗಿ ಕಲ್ಲವ್ವನಿಗೆ ದಿಕ್ಕು ತೋಚದಂಗಾಗಲು ಅದೇ ನೋವಿನಲ್ಲೇ ಅದೆಷ್ಟೋ ಹಗಲು ರಾತ್ರಿಗಳನ್ನು ಬರೀ ಚಿಂತೆಯಲ್ಲಿ ಸುಡತೊಡಗಿದಳು. ಕಡೆಗೂ ಒಂದು ನಿರ್ಧಾರಕ್ಕೆ ಬಂದ ಆಕೆ ಹುಚ್ಚಪ್ಪನಿಲ್ಲದ ಈ ಮನೆಯಲ್ಲಿ ತಾನು ರಂಡೆ ಮುಂಡೆಯಾಗಿ ಬಾಳೇವಿಯನ್ನು ತೆಗೆಯಲಾರೆ ಎಂದುಕೊಂಡು, ತನ್ನ ಪಾಲಿನ ಒಡಕಿ ಮ್ಯಾಲಿನ ಎರಡೆಕರೆ ಜಮೀನನ್ನು ಇದ್ದ ಪರಿಸ್ಥಿತಿಯಲ್ಲಿಯೇ ಬಿಟ್ಟು ಬಂದು ತೌರುಮನೆಯಲ್ಲಿ ತನ್ನವ್ವನೊಂದಿಗೆ ಇದ್ದುಬಿಟ್ಟಳು. ಒಂದು ರೀತಿಯಲ್ಲಿ ಕೊನೆಗೂ ಕಲ್ಲವ್ವನ ಬಾಳೇವಿಯೂ ಸಹ ಸಿದ್ಧಮ್ಮನ ಬಾಳೇವಿಯಂತೆಯೇ ಆಗಿ ಹೋಯಿತು!

ಅಂದೇ ಕೊನೆಯಾಯಿತು! ಕಲ್ಲವ್ವ, ತನ್ನ ಗಂಡನ ಮನೆಯೊಂದಿಗಿನ ಸಂಬಂಧವನ್ನು ಶಾಶ್ವತವಾಗಿ ಕಡಿದುಕೊಂಡು ಬಿಟ್ಟಳು. ಹೇಗೋ ತೌರುಮನೆಯಲ್ಲಿ ನೆರೆಹೊರೆಯವರ ಮನೆಗಳಲ್ಲಿ ಕಸ ಮುಸುರೆಯೊಂದಿಗೆ ಊರವರ ಹೊಲಗಳಲ್ಲಿ ಕೂಲಿ ಕೆಲಸ ಮಾಡಿಕೊಂಡು, ತನ್ನವ್ವನಿಗೆ ತಾನು, ತನಗೆ ತನ್ನವ್ವ ಎಂಬಂತೆ ಒಬ್ಬರಿಗೊಬ್ಬರು ಆಸರೆಯಾಗಿದ್ದುಕೊಂಡು ಜೀವ ಸವೆಸತೊಡಗಿದರು. ಆದರೆ, ಕಲ್ಲವ್ವನ ವಿಚಾರದಲ್ಲಿ ಎಲ್ಲವೂ ನೆಟ್ಟಗೆ ನಡೆದುಕೊಂಡು ಹೋಗುತ್ತಿದೆ ಎಂದುಕೊಳ್ಳುವಾಗಲೇ ವಿಧಿ ವಿಪರೀತ ಎಂಬಂತೆ ಆಕೆಯ ಬದುಕಿನಲ್ಲಿ ಯಾರೂ ಊಹಿಸಲಾಗದ ಮತ್ತೊಂದು ಘಟನೆ ಸಂಭವಿಸಿತು. ಅದೊಂದು ದಿನ ವಿಪರೀತ ಜ್ವರ ಬಂದ ನೆಪದಲ್ಲಿ ಹಾಸುಗೆ ಹಿಡಿದ